4ನೇ ಸೆಮಿಸ್ಟರ್ ಬಿ.ಕಾಂ. Examination, June 2008
(Semester Scheme)
# LANGUAGE KANNADA – IV
## ವ್ಯಾವಹಾರಿಕ ಕನ್ನಡ + ಕತೆಗಳು

Time : 3 Hours Max. Marks : 90

ಭಾಗ – ೧

1. ಈ ಗದ್ಯಭಾಗವನ್ನು ಸಂಕ್ಷೇಪಿಸಿ ಸೂಕ್ತ ಶೀರ್ಷಿಕೆಯನ್ನು ನೀಡಿ : 10

ಮಸಾಲೆ ದ್ರವ್ಯಗಳಲ್ಲೆಲ್ಲ ಅತ್ಯುತ್ತಮವೆನಿಸಿದ ಸಸ್ಯಮೂಲ ಖಾರದ್ರವ್ಯ, ಕಾಳುಮೆಣಸು. ದಕ್ಷಿಣ ಭಾರತದ ಎಲ್ಲ ಭಾಷೆಗಳಲ್ಲೂ ಇದರ ಹೆಸರಿಗೆ 'ಒಳ್ಳೆ' ಎಂಬ ವಿಶೇಷಣ ಬರಲು ಇದರ ಗುಣಾಧಿಕ್ಯವೇ ಕಾರಣ. ಜಗತ್ತಿನಲ್ಲೇ ಹೆಸರು ಪಡೆದ ಈ ವ್ಯಾಪಾರೀ ವಸ್ತು ಒಂದು ಕಾಲದಲ್ಲಿ 'ಬ್ಲಾಕ್ ಗೋಲ್ಡ್' ಎನಿಸಿ, ಹಲವು ದೇಶಗಳ ಚರಿತ್ರೆ ಬದಲಾವಣೆಗೂ ಕಾರಣವಾಗಿದೆ. ಮಲಬಾರ್‌ನಲ್ಲಿ ಬೆಳೆಯುವ ಮೆಣಸು ಗುಣಕ್ಕೆ ಹೆಸರಾದರೆ ಉತ್ತರ ಕನ್ನಡದಲ್ಲಿ ಬೆಳೆಯುವ ಮೆಣಸು ಗುಣ, ಗಾತ್ರ, ತೂಕಗಳಲ್ಲಿ ಉತ್ತಮವೆಂದು ಪರಿಗಣಿತವಾಗಿದೆ. ಔಷಧಿ ದ್ರವ್ಯವಾಗಿಯೂ ಮೆಣಸು ಅಪಾರ ಗುಣವನ್ನು ಹೊಂದಿದೆ. ಆಯುರ್ವೇದವಂತೂ ನೂರಾರು ರೋಗಗಳಿಗೆ ಏಕಮೂಲಿಕೆಯಾಗಿಯೂ ನೂರಾರು ಔಷಧಿಗಳಿಗೆ ಪ್ರಮುಖ ದ್ರವ್ಯವಾಗಿಯೂ ಇದನ್ನು ಹೆಸರಿಸಿದೆ. ಆಹಾರದಿಂದ ವಿಷ ಪರಿಣಾಮವಾಗದಂತೆಯೂ ಇದು ತಡೆಯುತ್ತದೆ. ಕೊಬ್ಬು, ತೈಲಗಳು, ಸಿದ್ಧ ಆಹಾರ ವಸ್ತುಗಳು, ಮಾಂಸೋತ್ಪನ್ನಗಳು, ಅಮಲು ಪಾನೀಯಗಳು, ಪರಿಮಳ ದ್ರವ್ಯಗಳು - ಇವುಗಳನ್ನು ದೀರ್ಘಕಾಲ ಕೆಡದಂತೆ, ಗುಣಹಾನಿಯಾಗದಂತೆ ಉಳಿಸುವುದರಲ್ಲಿ ಇದು ಉಪಯುಕ್ತವಾದುದು. ಅಲ್ಲದೆ ಎಷ್ಟು ವರ್ಷಗಳಾದರೂ ಕೆಡದಿರುವ ಗುಣವನ್ನು ಇದು ಹೊಂದಿದೆ. ಐವತ್ತು ವರ್ಷ ಹಿಂದಿನ ಮೆಣಸಿನ ದಾಸ್ತಾನು ಇಂದೂ ಕೆಲ ಮನೆಗಳಲ್ಲಿರುವುದೂ, ಗುಣ ಉಳಿಸಿಕೊಂಡಿರುವುದೂ ಇದಕ್ಕೆ ಸಾಕ್ಷಿ. ಆರೇಳು ತರದ ಬೂಸ್ಟುಗಳು, ಇಪ್ಪತ್ತಕ್ಕೆ ಮೇಲ್ಪಟ್ಟ ಕ್ರಿಮಿ ವಿಧಗಳನ್ನು ಇದು ನಾಶಮಾಡುತ್ತದೆಂದು ತಿಳಿದು ಬಂದಿದೆ.

ದಕ್ಷಿಣ ಭಾರತದ ಕಾಡುಗಳಲ್ಲಿ, ದಕ್ಷಿಣ ದ್ವೀಪಗಳಲ್ಲಿ ಮೆಣಸು ಸ್ವಾಭಾವಿಕವಾಗಿಯೇ ಬೆಳೆಯುತ್ತದೆ.

2. ಅಭ್ಯರ್ಥನ ಪತ್ರವೆಂದರೇನು ? ಉತ್ತಮ ಅಭ್ಯರ್ಥನ ಪತ್ರದಲ್ಲಿ ಇರಬೇಕಾದ ಅಂಶಗಳನ್ನು ವಿವರಿಸಿ. ಪ್ರತಿಷ್ಠಿತ ಕಂಪೆನಿಯ ಜಾಹೀರಾತಿನನ್ವಯ ಕನ್ನಡ ಕಂಪ್ಯೂಟರ್ ತಜ್ಞರ ಹುದ್ದೆಗೆ ಒಂದು ಅಭ್ಯರ್ಥನ ಪತ್ರವನ್ನು ಬರೆಯಿರಿ. 10

ಅಥವಾ

ನೇಮಕಾದೇಶ ಮತ್ತು ಹಾಜರಾತಿ ವರದಿಗಳನ್ನು ವಿವರಿಸಿ. ಒಂದು ಹಾಜರಾತಿ ವರದಿಯ ಮಾದರಿ ಪತ್ರವನ್ನು ತಯಾರಿಸಿ.

3. ಕೂಡು ಬಂಡವಾಳ ಸಂಸ್ಥೆಯ ಕಾರ್ಯದರ್ಶಿಯ ಸ್ಥಾನ ಮತ್ತು ಕಾರ್ಯಭಾರಗಳನ್ನು ವಿವರಿಸಿರಿ. 10

ಅಥವಾ

ನೀರಾವರಿ ಕಂಪೆನಿಯೊಂದರಲ್ಲಿ ಜರುಗಿದ ದ್ವಿತೀಯ ವಾರ್ಷಿಕ ಮಹಾಸಭೆಯ ತಿಳುವಳಿಕೆ ಪತ್ರ ಮತ್ತು ಕಾರ್ಯಸೂಚಿಯನ್ನು ಬರೆಯಿರಿ.

4. ವರದಿ ಎಂದರೇನು ? ನಿಮ್ಮ ಊರಿನಲ್ಲಿ ಹಿಟ್ಟಿನ ಗಿರಣಿಯನ್ನು ಸ್ಥಾಪಿಸುವ ವಿಚಾರವನ್ನು ಪರಿಶೀಲಿಸಿ. ಒಂದು ಏಕವ್ಯಕ್ತಿ ವರದಿಯನ್ನು ಸಿದ್ಧಪಡಿಸಿ. 10

ಅಥವಾ

ಸಮಿತಿ ವರದಿಯ ಮುಖ್ಯ ಲಕ್ಷಣಗಳನ್ನು ವಿವರಿಸಿ. ಬೆಂಗಳೂರಿನಲ್ಲಿ ರೂಪುಗೊಳ್ಳಲಿರುವ ಕಾರಿಡಾರ್ ರಸ್ತೆಯ ಬಗೆಗೆ ಒಂದು ಸಮಿತಿ ವರದಿಯನ್ನು ರಚಿಸಿ.

5. ನಾಲ್ಕನ್ನು ಕುರಿತು ಟಿಪ್ಪಣಿ ಬರೆಯಿರಿ : (4×5=20)

1) ಜಾಹೀರಾತು

2) ಕರೆಪತ್ರ

3) ಕಂಪೆನಿಯ ಷರತ್ತುಗಳು

4) ನಿರ್ಣಯಗಳು

5) ಸಂಕ್ಷೇಪ ಲೇಖನ

6) ನಿರ್ದೇಶಕ ಮಂಡಳಿ

ಭಾಗ – ೨

6. ಎರಡು ಪ್ರಶ್ನೆಗಳಿಗೆ ಸಂಕ್ಷೇಪ ಉತ್ತರ ಬರೆಯಿರಿ : (2×5=10)

1) ಸೀದಿ ಸಾಹುಕಾರರು ನರಕಕ್ಕೆ ಹೋಗಲು ಕಾರಣ.

2) ಕುಂಟ ಜೋಸೆಫ್ ಮತಾಂತರಗೊಂಡ ಹಿನ್ನೆಲೆ.

3) ಮೂಸಾಮುಸ್ಲಿಯಾರರ ಆತ್ಮ ವಿಶ್ವಾಸಕ್ಕೆ ಕಾರಣವಾದ ಪ್ರಸಂಗ.

4) ಬೇಬಿ ಮತ್ತು ಮುಕುಂದಣ್ಣನ ವಿವಾಹ.

7. ಎರಡು ಪ್ರಶ್ನೆಗಳಿಗೆ ವಿಮರ್ಶಾತ್ಮಕ ಉತ್ತರವನ್ನು ಬರೆಯಿರಿ : (2×10=20)

1) ಬೊಳುವಾರರ ಕತೆಗಳಲ್ಲಿ ಕಂಡುಬರುವ ಮುಸ್ಲಿಂ ಸಂವೇದನೆಯನ್ನು ವಿವರಿಸಿ.

2) ಮೆಹರುನ್ನೀಸಾಳ ವಿವಾಹ ಅವಳ ಬದುಕು, ಭಾವನೆಗಳ ಮೇಲೆ ಬೀರಿದ ಪರಿಣಾಮವನ್ನು ವಿವರಿಸಿ.

3) ಜಾತಿ, ಮತಗಳಿಗಿಂತ ಪ್ರೀತಿ ಮುಖ್ಯ ಎಂಬ ಅಂಶ 'ಅಂಕ' ಕತೆಯಲ್ಲಿ ಹೇಗೆ ಮೂಡಿದೆ ? ವಿಚಾರಿಸಿ.

4) ರೊಟ್ಟಿಪಾತುಮ್ಮ, ಗಿರಿಜಾ, ಶ್ರೀನಿವಾಸಾಚಾರ್ - ಇವರಲ್ಲಿ ಇಬ್ಬರ ಪಾತ್ರಚಿತ್ರಣವನ್ನು ಕುರಿತು ಬರೆಯಿರಿ.